# ಮಂಗಳೂರು ಗುಂಪು ಹತ್ಯೆ ಪ್ರಕರಣ - ಸಂವಿಧಾನದ ಕಗ್ಗೊಲೆಯ ಬಗ್ಗೆ ಮೌನ ಮುರಿಯಬೇಕಿದೆ:

<u>ಸತ್ಯಶೋಧನಾ ವರದಿಯ ಮುಖ್ಯಾಂಶಗಳು</u>

ಮಂಗಳೂರಿನ ಕುಡುಪು ಗ್ರಾಮದಲ್ಲಿ 39 ವರ್ಷದ ಮುಸ್ಲಿಂ ವ್ಯಕ್ತಿ ಮೊಹಮ್ಮದ್ ಅಶ್ರಫ್ ಅವರನ್ನು ಗುಂಪುಹತ್ಯೆಗೈದ ಘಟನೆಯನ್ನು ಮತ್ತು ಸದರಿ ಪ್ರಕರಣದಲ್ಲಿ ಪೊಲೀಸರ ಮತ್ತು ರಾಜ್ಯ ಸರ್ಕಾರದ ಪಾತ್ರವೇನು ಎಂಬುದನ್ನೂ, ಹಾಗೂ ತನಿಖೆಯಲ್ಲಿ ಕಂಡುಬಂದ ಲೋಪ ದೋಷಗಳನ್ನು ಈ ವರದಿ ದಾಖಲಿಸುತ್ತದೆ. ದಕ್ಷಿಣ ಕನ್ನಡದಲ್ಲಿ ದಿನೇ ದಿನೇ ಕಣ್ಮರೆಯಾಗುತ್ತಿರುವ ಕಾನೂನು ಸುವ್ಯವಸ್ಥೆ ಮತ್ತು ಹೆಚ್ಚುತ್ತಿರುವ ಕೋಮು ದ್ವೇಷದ ವಾತಾವರಣವು ಅಶ್ರಫ್ ಅವರನ್ನು ಆಹುತಿ ಪಡೆದಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ, ದಕ್ಷಿಣ ಕನ್ನಡದ ನಾಗರಿಕರು ಮತ್ತು ನಾಗರಿಕ ಸಮಾಜವು ತುರ್ತಾಗಿ ಮಧ್ಯಪ್ರವೇಶಿಸಿ ಕಾನೂನು ಸುವ್ಯವಸ್ಥೆಯನ್ನು ಮರುಸ್ಥಾಪಿಸಿಬೇಕು ಮಾತ್ರವಲ್ಲ, ಎಲ್ಲರ ಜೀವಿಸುವ ಹಕ್ಕನ್ನು ಕಾಪಿಟ್ಟು ಮತ್ತು ಜೀವಗಳಿಗೆ ಮೌಲ್ಯವನ್ನು ಎತ್ತಿಹಿಡಿಯಬೇಕೆಂದು ಈ ವರದಿ ಆಗ್ರಹಿಸುತ್ತದೆ.

ಅಶ್ರಫ್ ಅವರ ಹತ್ಯೆಯ ನಡೆದು ಬರೋಬ್ಬರಿ ಎರಡು ತಿಂಗಳುಗಳೇ ಕಳೆದುಹೋಗಿವೆ. ಆದರೂ, ರಾಜ್ಯ ಸರ್ಕಾರವು ಸದರಿ ಪ್ರಕರಣದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರನ್ನು (ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್) ಅನ್ನು ಈವರೆಗೂ ನೇಮಿಸಿಲ್ಲ. ಮೃತ ಅಶ್ರಫ್ ಅವರ ಕುಟುಂಬಕ್ಕೆ ಮರಣೋತ್ತರ ಪರೀಕ್ಷೆಯ ವರದಿಯನ್ನೂ ನೀಡಿಲ್ಲ. ಅಲ್ಲದೇ ತೆಹಸೀನ್ ಪೂನಾವಾಲಾ ಪ್ರಕರಣ ಮತ್ತು ಸರ್ಕಾರಿ ಆದೇಶ ಸಂಖ್ಯೆ: HD 01 CRR 2023, Bengaluru dated 27.09. 2023 ರ ಅನ್ವಯ ಸಂತ್ರಸ್ತರಿಗೆ ನೀಡಬೇಕಾದ ಪರಿಹಾರವನ್ನು ಒದಗಿಸಿಲ್ಲ. ಇವೆಲ್ಲವೂ ಸರ್ಕಾರದ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

## I. ಪೀಠಿಕೆ: ಸಂವಿಧಾನದ ನಮಗಿತ್ತಿರುವ ಆಶ್ವಾಸನೆಯ ವಂಚನೆ

ಏಪ್ರಿಲ್ 2025 ರಲ್ಲಿ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಭಾರತದಲ್ಲಿ ತೀವ್ರಗೊಂಡ ಕೋಮು ಉದ್ವಿಗ್ನತೆಯ ಹಿನ್ನೆಲೆಯಲ್ಲಿ ಈ ಘಟನೆಯನ್ನು ಅರ್ಥೈಸಬೇಕಿದೆ. ಈ ಘಟನೆ ನಡೆದದ್ದು ಪಹಲ್ಗಾಮ್ ದಾಳಿ ನಡೆದ ಕೇವಲ ಐದು ದಿನಗಳ ನಂತರ. ಅಂತಹ ಉದ್ವಿಘ್ನ ಸಂದರ್ಭದಲ್ಲಿ ಕೋಮುವಾದಿ ಮಾಧ್ಯಮಗಳು ಮತ್ತು ಎಲ್ಲೆಡೆ ಹಬ್ಬಿದ್ದ ರಾಜಕೀಯ ಕಥನಗಳು ಮುಸ್ಲಿಮರ ವಿರುದ್ಧ ಸಮಾಜದ ಭಾವನೆಗಳನ್ನು ಕೆರಳಿಸಿದ್ದವು. ಅಶ್ರಫ್ ಅವರ ಗುಂಪು ಹತ್ಯೆಯ ಹಿಂದಿನ ಸತ್ಯಾಂಶವನ್ನು ಬಯಲಿಗೆಳೆದು, ಅದನ್ನು ಜನರ ಮುಂದಿಡುವ ದೃಷ್ಟಿಯಿಂದ, ಮಾನವ ಹಕ್ಕು ಸಂಘಟನೆಗಳಾದ ಪಿ.ಯು.ಸಿ.ಎಲ್ - ಕರ್ನಾಟಕ, ಎ.ಪಿ.ಸಿ.ಆರ್ - ಕರ್ನಾಟಕ ಮತ್ತು ಎ.ಐ.ಎಲ್.ಎ.ಜೆ - ಕರ್ನಾಟಕ ಈ ಸತ್ಯಶೋಧನಾ ಕಾರ್ಯವನ್ನು ಕೈಗೊಂಡವು. ಏಕಪಕ್ಷೀಯ ಮಾಧ್ಯಮ ಪ್ರಸಾರ, ಆಧಾರರಹಿತ ಕೋಮುವಾದಿ ರಾಜಕೀಯ ಕಥನಗಳು ಮತ್ತು ಪೊಲೀಸರ ತನಿಖೆಯಲ್ಲಿನ ಗಂಭೀರ ಲೋಪಗಳ ನಡುವೆಯೂ, ಜನರಿಗೆ ಸತ್ಯವನ್ನು ತಿಳಿಸುವುದು ಇದರ ಉದ್ದೇಶವಾಗಿತ್ತು. ದಕ್ಷಿಣ ಕನ್ನಡದಲ್ಲಿ ಸಮುದಾಯಗಳ ನಡುವಿನ ದ್ವೇಷ ಮತ್ತು ಧ್ರುವೀಕರಣ ಎಷ್ಟು ಆಳವಾಗಿ ಬೇರೂರಿದೆ ಎಂಬುದರ ಬಗ್ಗೆಯೂ ಈ ವರದಿ ನಮ್ಮ ಗಮನಸೆಳೆಯುತ್ತದೆ. ಈ ದ್ವೇಷ ಮತ್ತು ಧ್ರುವೀಕರಣವು ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಖಲಾದ ಸಾಂಸ್ಕೃತಿಕ ಗೂಂಡಾಗಿರಿ ಮತ್ತು ಮತೀಯ ಗೂಂಡಾಗಿರಿಗೆ ನೇರವಾಗಿ ತಳುಕು ಹಾಕಿಕೊಂಡಿದ್ದು, ಇದುವೇ ಇಂದಿನ ಕೋಮು ದ್ವೇಷ ಅಪರಾಧಗಳಿಗೆ ಕಾರಣವಾಗಿದೆ.

## II. ಘಟನೆ ನಡೆದದ್ದು ಹೇಗೆ: ವಿಳಂಬಿತ ಮತ್ತು ತಿರುಚಿದ ಪ್ರತಿಕ್ರಿಯೆ

ಪಹಲ್ಗಾಮ್ ದಾಳಿಯ ಕೇವಲ 5 ದಿನಗಳ ನಂತರ, ಏಪ್ರಿಲ್ 27 ರಂದು ಮಂಗಳೂರಿನ ಕುಡುಪುವಿನಲ್ಲಿ ಅಶ್ರಫ್ ಎಂಬ ವ್ಯಕ್ತಿ ಕೊಲ್ಲಲ್ಪಟ್ಟರು. ಅಲ್ಲಿ ನಡೆದ ಪ್ರಮುಖ ಘಟನೆಗಳನ್ನು ಕೆಳಗೆ ದಾಖಲಿಸಲಾಗಿದೆ:

27 ಏಪ್ರಿಲ್ 2025, ಭಾನುವಾರ

- **ಮಧ್ಯಾಹ್ನ 2:00 - ಸಂಜೆ 5:00 ಗಂಟೆ:** ಭಟ್ರಳ್ಳಿ ದೇವಸ್ಥಾನ ಮತ್ತು ಕ್ರಿಕೆಟ್ ಆಟದ ಮೈದಾನದ ನಡುವಿನ ಮಣ್ಣಿನ ರಸ್ತೆಯಲ್ಲಿ ಗುಂಪೊಂದು ಅಶ್ರಫ್ ಅವರನ್ನು ಥಳಿಸಿ ಕೊಂದಿತು.
- **ಸಂಜೆ ಸುಮಾರು 5:00 - 5:30 ಗಂಟೆ:**
    - ಮೃತದೇಹದ ಬಗ್ಗೆ ಪೊಲೀಸ್ ಇಲಾಖೆ ಮತ್ತು ಅಪರಾಧ ವಿಭಾಗದ ಸಿಬ್ಬಂದಿಗೆ ಮಾಹಿತಿ ದೊರೆಯುತ್ತದೆ.
    - ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ), ಪೊಲೀಸ್ ಆಯುಕ್ತರು ಹಾಗೂ ಸ್ಥಳೀಯ ಪೊಲೀಸ್ ಠಾಣೆಯ ಅಧಿಕಾರಿಗಳು ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡುತ್ತಾರೆ.
    - ಪೊಲೀಸರು ಸ್ಥಳದಲ್ಲೇ ವಿಚಾರಣೆ ನಡೆಸಿ ಪಂಚನಾಮೆ ಮಾಡುತ್ತಾರೆ.
    - ಮೃತರ ಗುರುತು ಪತ್ತೆ ಹಚ್ಚಲು ಲುಕ್ ಔಟ್ ನೋಟಿಸ್ ಹೊರಡಿಸಲಾಗುತ್ತದೆ.
    - ಅಸಹಜ ಸಾವು ಪ್ರಕರಣ (ಯುಡಿಆರ್) ದಾಖಲೆಯಾಗುತ್ತದೆ.
    - ಮೃತರು "ಪಾಕಿಸ್ತಾನ್ ಜಿಂದಾಬಾದ್" ಎಂದು ಘೋಷಣೆ ಕೂಗಿದ್ದಾರೆ ಎಂಬ ವದಂತಿಗಳು

ಹರಡಲು ಪ್ರಾರಂಭವಾಗುತ್ತದೆ.

- **ಸಂಜೆ ಸುಮಾರು 5:00 - 6:00 ಗಂಟೆ:** ಕೊಲೆ ನಡೆದಿರುವ ಬಗ್ಗೆ ಮಾಹಿತಿ ಮತ್ತು ಕೊಲೆಯಾದ ವ್ಯಕ್ತಿ ಘೋಷಣೆಗಳನ್ನು ಕೂಗಿದ್ದ ಎಂಬ ವದಂತಿ ಸ್ಥಳೀಯ ಮಾಧ್ಯಮಗಳಿಗೆ ದೊರೆಯುತ್ತದೆ.
- **ಸಂಜೆ 7 ಗಂಟೆಗೆ:** ಪೊಲೀಸ್ ಆಯುಕ್ತರು ಮಾಧ್ಯಮಗಳಿಗೆ ಹೇಳಿಕೆ ನೀಡಿ, ವದಂತಿಗಳನ್ನು ಹರಡದಂತೆ ವಿನಂತಿಸುತ್ತಾರೆ.

28 ಏಪ್ರಿಲ್ 2025, ಸೋಮವಾರ

- **ಬೆಳಗ್ಗೆ:**
  - ಮಾಜಿ ನಗರಸಭಾ ಸದಸ್ಯರು ಮತ್ತು ಕಾಂಗ್ರೆಸ್ ಮುಖಂಡರು ಸೇರಿದಂತೆ ಸ್ಥಳೀಯ ಕಾರ್ಯಕರ್ತರ ಗುಂಪು ಪೊಲೀಸ್ ಠಾಣೆಗೆ ಭೇಟಿ ನೀಡುತ್ತದೆ.
  - ಮಾಧ್ಯಮಗಳು ತಮ್ಮ ಮೂಲಗಳ ಪ್ರಕಾರ ಇದು ಗುಂಪು ಹತ್ಯೆ ಎಂಬುದಾಗಿ ಖಚಿತಪಡಿಸುತ್ತವೆ.
- **ಸಂಜೆ 6 ಗಂಟೆಯ ನಂತರ:** ಮೃತರನ್ನು ಗುರುತಿಸಲು ಹೊರಡಿಸಲಾಗಿದ್ದ ಲುಕ್ ಔಟ್ ನೋಟಿಸ್ ಮಾಧ್ಯಮಗಳಿಗೆ ದೊರೆಯುತ್ತದೆ.
- **ಸಂಜೆ 6:30 ಗಂಟೆ:** ಗಂಭೀರವಾದ ಗಾಯಗಳೇನೂ ಕಂಡುಬಂದಿಲ್ಲ ಎಂದು ಪೊಲೀಸ್ ಆಯುಕ್ತರು ಸ್ಥಳೀಯ ಕಾರ್ಯಕರ್ತರಿಗೆ ತಿಳಿಸುತ್ತಾರೆ.
- **ಏಪ್ರಿಲ್ 28 ರ ತಡರಾತ್ರಿ** ಮಂಗಳೂರು ಪೊಲೀಸ್ ಆಯುಕ್ತರು ಮಾಧ್ಯಮಗಳಿಗೆ ಹೇಳಿಕೆ ನೀಡಿ ವದಂತಿಗಳನ್ನು ಹರಡದಂತೆ ಮನವಿ ಮಾಡಿ, ಮೃತದೇಹ ಯಾರದ್ದೆಂದು ತಮಗೆ ತಿಳಿದಿಲ್ಲ ಎಂದು ಮಾಹಿತಿ ನೀಡುತ್ತಾರೆ.
- **ರಾತ್ರಿ 10:00 - 11:30 ಗಂಟೆ:** ಕುಟುಂಬದವರ ಅನುಪಸ್ಥಿತಿಯಲ್ಲಿ ವೆನ್ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗುತ್ತದೆ.
- **ರಾತ್ರಿ 11:25 ಗಂಟೆ:** ದೀಪಕ್ ಕುಮಾರ್ ಎಂಬುವವರ ದೂರಿನ ಆಧಾರದ ಮೇಲೆ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಲಾಗುತ್ತದೆ.

29 ಏಪ್ರಿಲ್ 2025, ಮಂಗಳವಾರ

- **ಬೆಳಗ್ಗೆ 11:30 ಗಂಟೆ:** ಗುಂಪು ಹತ್ಯೆಗಾಗಿ 19 ಜನರನ್ನು ಬಂಧಿಸಿದ ನಂತರ ಪೊಲೀಸ್ ಆಯುಕ್ತರು ಪತ್ರಿಕಾಗೋಷ್ಠಿ ನಡೆಸುತ್ತಾರೆ; ಅಲ್ಲಿಯವರೆಗೆ ಮೃತದೇಹವನ್ನು ಯಾರದ್ದು ಎಂಬದನ್ನು ಇನ್ನೂ ಗುರುತಿಸಲಾಗಿರುವುದಿಲ್ಲ.
- **ಮಧ್ಯಾಹ್ನ 2:30 ಗಂಟೆ:** ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಗುಂಪು ಹತ್ಯೆಯನ್ನು ಖಚಿತಪಡಿಸುತ್ತಾರೆ; (ಇನ್ನೂ ಗುರುತನ್ನು ಪತ್ತೆಹಚ್ಚಲಾಗುತ್ತಿರುವ) ವ್ಯಕ್ತಿಯೊಬ್ಬ ಕ್ರಿಕೆಟ್ ಪಂದ್ಯದ ವೇಳೆ "ಪಾಕಿಸ್ತಾನ್ ಜಿಂದಾಬಾದ್" ಎಂದು ಕೂಗಿದ್ದರಿಂದ ಗುಂಪಿನಿಂದ ಹಲ್ಲೆಗೊಳಗಾಗಿ ಸಾವನ್ನಪ್ಪಿದ್ದಾನೆ ಎಂದೂ, ಇದಕ್ಕೆ ಸಂಬಂಧಿಸಿದಂತೆ 10-12 ಜನರನ್ನು ಬಂಧಿಸಲಾಗಿದೆ ಎಂದು ತಿಳಿಸುತ್ತಾರೆ; ಸಾರ್ವಜನಿಕರು ಶಾಂತಿ ಕಾಪಾಡಬೇಕೆಂದು ಮತ್ತು ಕಾನೂನನ್ನು ಕೈಗೆತ್ತಿಕೊಳ್ಳಬಾರದೆಂದು ಅವರು ಹೇಳಿಕೆ ನೀಡುತ್ತಾರೆ.
- **ಸಂಜೆ 4:00 ಗಂಟೆ:** ಮೃತದೇಹ ಮೊಹಮ್ಮದ್ ಅಶ್ರಫ್ ಅವರದ್ದು ಎಂಬುದಾಗಿ ಗುರುತಿಸಲಾಗುತ್ತದೆ; ಪೊಲೀಸರು ಅಶ್ರಫ್ ಕುಟುಂಬಕ್ಕೆ ಸುದ್ದಿ ತಿಳಿಸುತ್ತಾರೆ.
- **ರಾತ್ರಿ 10:00 ಗಂಟೆ:** ಪೊಲೀಸರು ಮತ್ತೂ 6 ಆರೋಪಿಗಳನ್ನು ಬಂಧಿಸುತ್ತಾರೆ.

30 ಏಪ್ರಿಲ್ 2025, ಬುಧವಾರ

- **ಮಧ್ಯರಾತ್ರಿ 12:30 ಗಂಟೆ:** ಮೊಹಮ್ಮದ್ ಅಶ್ರಫ್ ಅವರ ಕುಟುಂಬದವರು ಮಂಗಳೂರಿಗೆ ಬರುತ್ತಾರೆ.
- **ಬೆಳ್ಳಗಿನ ಜಾವ 3:30 ಗಂಟೆ:** ಅಶ್ರಫ್ ಅವರ ಸೋದರ ಸೇರಿದಂತೆ, ಅವರ 3 ಜನ ಕುಟುಂಬ ಸದಸ್ಯರು ಮಂಗಳೂರಿನ ವೆನ್ಲಾಕ್ ಶವಾಗಾರದಲ್ಲಿ ಮೃತದೇಹವನ್ನು ಗುರುತಿಸುತ್ತಾರೆ. ಗುರುತು ದೃಢಪಡಿಸಿದ ನಂತರ ಮೃತದೇಹವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗುತ್ತದೆ.
- **ಬೆಳಿಗ್ಗೆ 11:30 ಗಂಟೆ:** ಕೇರಳದ ಮಲಪ್ಪುರಂ ಜಿಲ್ಲೆಯ ಕೊಟ್ಟಕ್ಕಲ್‌ನ ಚೋಲಕ್ಕುಂಡು ಜುಮಾ ಮಸೀದಿಯಲ್ಲಿ ಅಶ್ರಫ್ ಅವರ ಅಂತ್ಯಕ್ರಿಯೆ ನಡೆಯುತ್ತದೆ.
- **ಮಧ್ಯಾಹ್ನ 3:00 ಗಂಟೆ:**
  - "ಯಾರೇ ಆಗಲಿ, ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದ್ದರೆ ಅದು ತಪ್ಪು. ತನಿಖೆ ಇನ್ನೂ ನಡೆಯುತ್ತಿದೆ; ಪ್ರಕರಣ ದಾಖಲಿಸಲಾಗಿದೆ. ವರದಿ ಬಂದ ನಂತರ ಯಾರು ತಪ್ಪು ಮಾಡಿದ್ದಾರೆಂದು ತಿಳಿದು ಕ್ರಮ ಕೈಗೊಳ್ಳಲಾಗುವುದು. ಯಾರಾದರೂ ಪಾಕಿಸ್ತಾನ್ ಪರವಾಗಿ ಮಾತನಾಡಿದರೆ ಅದು ತಪ್ಪು, ಅದು ದೇಶದ್ರೋಹ," ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಧ್ಯಮಗಳಿಗೆ ಹೇಳಿಕೆ ನೀಡುತ್ತಾರೆ.
  - 25 ಶಂಕಿತರಲ್ಲಿ 20 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಆಯುಕ್ತರು ಮಾಧ್ಯಮಗಳಿಗೆ ತಿಳಿಸುತ್ತಾರೆ. ಟಿ. ಸಚಿನ್, ಮಂಜುನಾಥ್, ಸಾಯ್‌ದೀಪ್, ನಿತೇಶ್ ಕುಮಾರ್, ದೀಕ್ಷಿತ್ ಕುಮಾರ್,

ಸಂದೀಪ್, ವಿವಿಯನ್ ಆಲ್ವಾರೆಸ್, ಶ್ರೀದತ್ತ, ರಾಹುಲ್, ಪ್ರದೀಪ್ ಕುಮಾರ್, ಮನೀಶ್ ಶೆಟ್ಟಿ, ಧನುಷ್, ದೀಕ್ಷಿತ್, ಕಿಶೋರ್ ಕುಮಾರ್, ಯತಿರಾಜ್, ಸಚಿನ್, ಅನಿಲ್, ಸುಶಾಂತ್ ಮತ್ತು ಆದರ್ಶ ಬಂಧಿತರಾಗಿರುತ್ತಾರೆ.

- **ರಾತ್ರಿ ಸುಮಾರು 8:30 ಗಂಟೆ:** ಗೃಹ ಸಚಿವರು ತಮ್ಮ ಹಿಂದಿನ ದಿನದ ಹೇಳಿಕೆಗೆ ಸ್ಪಷ್ಟೀಕರಣ ನೀಡುತ್ತಾರೆ.

**1** ಮೇ **2025,** ಗುರುವಾರ

- ದಕ್ಷಿಣ ಕನ್ನಡದ ಹಿರಿಯ ಕಾಂಗ್ರೆಸ್ ನಾಯಕರಾದ ಮಾಜಿ ಸಚಿವ ರಮಾನಾಥ ರೈ ಅವರು ಗುಂಪು ಹತ್ಯೆಯ ಕುರಿತು ವಿಶೇಷ ತನಿಖಾ ತಂಡದಿಂದ (SIT) ತನಿಖೆ ನಡೆಸಬೇಕೆಂದು ಒತ್ತಾಯಿಸುತ್ತಾರೆ.
- ಗುಂಪು ಹತ್ಯೆಯ ಬಗ್ಗೆ ತಕ್ಷಣ ವರದಿ ನೀಡದ ಕಾರಣ ಪೊಲೀಸ್ ಆಯುಕ್ತರು ಓರ್ವ ಇನ್ಸ್‌ಪೆಕ್ಟರ್ (ಚಂದ್ರ) ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳನ್ನು (ಯೆಲ್ಲಾಲಿಂಗ, ಶಿವಕುಮಾರ್) ಅಮಾನತುಗೊಳಿಸುತ್ತಾರೆ. ಘಟನೆ ನಡೆದ ತಕ್ಷಣ ದೀಪಕ್ ಎಂಬ ವ್ಯಕ್ತಿ ಪೊಲೀಸರಿಗೆ ಮಾಹಿತಿ ನೀಡಿದ್ದ ಎಂಬುದು ತನಿಖೆಯಿಂದ ತಿಳಿದುಬರುತ್ತದೆ.

**III.** ಆಘಾತಕಾರಿ ಸಂತ್ಯಾಂಶಗಳು

ಸತ್ಯಶೋಧನಾ ತಂಡವು ಈ ಕೆಳಗಿನ ಆತಂಕಕಾರಿ ಸತ್ಯಾಂಶಗಳನ್ನು ಗಮನಿಸಿದೆ:

1. **ಸಾರ್ವಜನಿಕರ ಉದಾಸೀನತೆ:** ಘಟನೆ ನಡೆದಾಗ ಕ್ರಿಕೆಟ್ ಪಂದ್ಯ ನಡೆಯುತ್ತಿತ್ತು ಮಾತ್ರವಲ್ಲ ಎಫ್.ಐ.ಆರ್‌ನಲ್ಲಿ 20 ಜನರ ಹೆಸರು ಉಲ್ಲೇಖಿಸಲಾಗಿದೆ. ಆದರೆ ಯಾರೊಬ್ಬರೂ ಕೂಡಾ ಗುಂಪು ಹತ್ಯೆಯನ್ನು ತಡೆಯಲು ಅಥವಾ ಪೊಲೀಸರಿಗೆ ಕರೆ ಮಾಡಲು ಪ್ರಯತ್ನಿಸದಿರುವುದು ಆತಂಕಕಾರಿಯಾಗಿದೆ.

2. **ಭಯದ ವಾತಾವರಣ:** ಘಟನೆ ನಡೆದ ಸ್ಥಳದಲ್ಲಿದ್ದವರೇ ಗುಂಪು ಹತ್ಯೆಯ ಬಗ್ಗೆ ಸ್ಥಳೀಯ ಕಾರ್ಯಕರ್ತರಿಗೆ ಮಾಹಿತಿ ನೀಡಿ ವಿಷಯವನ್ನು ಬೆಳಕಿಗೆ ತಂದರಾದರೂ, ಸತ್ಯಶೋಧನಾ ತಂಡದೊಂದಿಗೆ ಮಾತನಾಡಲು ಅವರೆಲ್ಲರೂ ಹೆದರಿದರು. ಇದು ಆ ಪ್ರದೇಶದಲ್ಲಿ ದ್ವೇಷದ ವಾತಾವರಣ ಎಷ್ಟು ವ್ಯಾಪಕವಾಗಿದೆ ಎಂಬುದನ್ನು ಸೂಚಿಸುತ್ತದೆ. ಸತ್ಯ ಹೇಳಿದರೆ ತೊಂದರೆಯಾಗಬಹುದು ಎಂಬ ಭಯವು ಜನರಲ್ಲಿದೆ ಎಂಬುದನ್ನು ಇದು ಸ್ಪಷ್ಟ ಪಡಿಸುತ್ತದೆ.

3. **ಸರ್ಕಾರ ಪ್ರಾಯೋಜಿತ ಸುಳ್ಳು ಕಥನ:** ನೆಲದ ಕಾನೂನುಗಳನ್ನೆಲ್ಲಾ ಗಾಳಿಗೆ ತೂರಿ ಅಶ್ರಫ್ ಅವರು 'ಪಾಕಿಸ್ತಾನ್ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದಾರೆ ಎಂದು ಆವರೆಗೆ ಎಲ್ಲೂ ವರದಿಯಾಗದ ವದಂತಿಗಳನ್ನು ಮೊದಲು ಪ್ರಸಾರ ಮಾಡಿದ್ದು ಗೃಹ ಸಚಿವರೇ. ನಂತರದಲ್ಲಿ, ಗೃಹ ಸಚಿವರ ಹೇಳಿಕೆಗಳನ್ನೇ ಮಾಧ್ಯಮಗಳು ಮತ್ತೂ ವ್ಯಾಪಕವಾಗಿ ಹರಡಿದ್ದು ಆತಂಕಕಾರಿಯಾಗಿದೆ.

4. **ಪೊಲೀಸರ ಪಾತ್ರ:** ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಮತ್ತು ಪೊಲೀಸ್ ಆಯುಕ್ತರು ಘಟನಾ ಸ್ಥಳದಲ್ಲಿದ್ದರೂ ತಕ್ಷಣವೇ ಎಫ್.ಐ.ಆರ್ ದಾಖಲಿಸಲು ವಿಫಲರಾಗಿರುವುದು ಪೋಲಿಸ್ ಉನ್ನತಾಧಿಕರಿಗಳ ಕರ್ತವ್ಯ ಲೋಪವನ್ನು ತೋರುತ್ತದೆ. ಅಲ್ಲದೇ ಈ ಘಟನೆಯಲ್ಲಿ ಅವರೂ ಕೈಜೋಡಿಸಿದ್ದಾರೆಯೇ ಎಂಬ ಸಂಶಯಗಳನ್ನು ಸೃಷ್ಟಿಸುತ್ತದೆ.

**IV.** ತನಿಖೆಯಲ್ಲಿನ ಸಮಸ್ಯೆಗಳು: ವ್ಯವಸ್ಥಿತ ವೈಫಲ್ಯ

ಸತ್ಯಶೋಧನಾ ತಂಡವು ತನಿಖೆಯಲ್ಲಿ ಹತ್ತು ಹಲವಾರು ಗಂಭೀರ ವೈಫಲ್ಯಗಳನ್ನು ಗುರುತಿಸಿದೆ:

1. **ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸುವಲ್ಲಿ ವಿಳಂಬ:** ಸಾವು ಸಂಭವಿಸಿರುವುದು ಹಿಂಸೆಯ ಕಾರಣಕ್ಕೆ ಎಂಬುದನ್ನು ಕಂಡೂ ಪೊಲೀಸರು ಮೊದಲು ಎಫ್.ಐ.ಆರ್ ಬದಲು ಅಸಹಜ ಸಾವು ವರದಿ (ಯುಡಿಆರ್) ದಾಖಲಿಸಿದರು. ಎಫ್.ಐ.ಆರ್ ದಾಖಲಿಸಲು ವಿಳಂಬವಾಗಿದ್ದು ಪ್ರಮುಖ ಸಾಕ್ಷ್ಯಗಳನ್ನು ನಾಶಪಡಿಸಲು ಮತ್ತು ಗುಂಪಿನ ಸದಸ್ಯರು ತಪ್ಪಿಸಿಕೊಳ್ಳಲು ಸಮಯ ನೀಡಿತು. ಕಾನೂನುಗಳ ಅನ್ವಯ ಯು.ಡಿ.ಆರ್ ಅನ್ನು ಮ್ಯಾಜಿಸ್ಟ್ರೇಟ್‌ಗೆ ಕಳುಹಿಸಬೇಕಾಗಿದ್ದರೂ ಅದನ್ನು ಕಳುಹಿಸಲಾಗಿಲ್ಲ.

2. **ಸುಳ್ಳು ಕಥನಗಳು ಮತ್ತು ಮಾಧ್ಯಮದ ಸಹಕಾರ:** ಗೃಹ ಸಚಿವರು ಅಶ್ರಫ್ ಅವರು "ಪಾಕಿಸ್ತಾನ್ ಜಿಂದಾಬಾದ್" ಎಂದು ಕೂಗಿದ್ದಾರೆ ಎಂಬ ವದಂತಿಯನ್ನೂ, ಅಪಪ್ರಚಾರವನ್ನೂ ಹರಡಿದರು. ಕೆಲವು ಮಾಧ್ಯಮಗಳು ಇದನ್ನು ದೊಡ್ಡದಾಗಿ ಬಿತ್ತರಿಸಿದವು, ಇದರಿಂದಾಗಿ ಪ್ರಕರಣದ ಬಗ್ಗೆ ಚರ್ಚೆಯಾಗುವುದಕ್ಕಿಂತಲೂ ಹೆಚ್ಚು ಸಂತ್ರಸ್ತರದ್ದೇ ತಪ್ಪು ಎಂಬುದಾಗಿ ಬಿಂಬಿಸಲು ಪ್ರಯತ್ನಗಳು ನಡೆದವು. ಇದು ಅಶ್ರಫ್ ಅವರ ಕುಟುಂಬವನ್ನು ಆಘಾತಕ್ಕೆ ದೂಡಿತು.

3. **ಘಟನಾ ಸ್ಥಳದಲ್ಲಿ ನಿರ್ಲಕ್ಷ್ಯ:** ಅನಾಮಧೇಯ ಸಾಕ್ಷಿಗಳ ಹೇಳಿಕೆಗಳು ಮತ್ತು ಸತ್ಯಶೋಧನಾ ತಂಡವು ಸಂಗ್ರಹಿಸಿದ ಛಾಯಾಚಿತ್ರಗಳ ಪ್ರಕಾರ, ಘಟನಾ ಸ್ಥಳದಲ್ಲಿ ಮೃತದೇಹದ ಬಳಿ ಕ್ರಿಕೆಟ್ ಆಟಗಾರರನ್ನೂ ಮತ್ತು ದ್ವಿಚಕ್ರ ವಾಹನಗಳನ್ನು ಪೊಲೀಸರು ಕಂಡರು. ಆದರೂ ಪ್ರಕರಣ ನಡೆದ ಸ್ಥಳವನ್ನು ತಕ್ಷಣವೇ ಭದ್ರಪಡಿಸಲು, ಸ್ಥಳದಲ್ಲಿದ್ದವರೆಲ್ಲರನ್ನು ತನಿಖೆಗೆ ಕರೆದು ಅಥವಾ ಅಲ್ಲಿದ್ದ ವಾಹನಗಳನ್ನು ಪತ್ತೆಹಚ್ಚಲು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಸಿಸಿಟಿವಿ ದೃಶ್ಯಾವಳಿಗಳನ್ನು ಸಹ ಪರಿಶೀಲಿಸಲಿಲ್ಲ. ಇವೆಲ್ಲವೂ ತನಿಖೆಯನ್ನು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸಲಾಯಿತು ಎಂಬುದನ್ನು ತೋರಿಸುತ್ತದೆ.

4. **ದಾಖಲೆಗಳ ಕೊರತೆ ಮತ್ತು ಮಾಹಿತಿ ಹಂಚಿಕೆಯಲ್ಲಿ ಲೋಪ:** ಕುಟುಂಬಕ್ಕೆ ಯು.ಡಿ.ಆರ್ ಅಥವಾ ಮರಣೋತ್ತರ ಪರೀಕ್ಷಾ ವರದಿಯ ಪ್ರತಿಗಳನ್ನು ನೀಡಲಾಗಿಲ್ಲ. ನಗರದ ಪೊಲೀಸ್ ವರಿಷ್ಠರುಗಳು ಘಟನೆ ನಡೆದ ಸ್ಥಳದಲ್ಲಿದ್ದರು ಮಾತ್ರವಲ್ಲ ಅಮಾನತುಗೊಂಡ ಇನ್ಸ್‌ಪೆಕ್ಟರ್ ಜೊತೆಗೇ ಘಟನೆ ನಡೆದ ಸ್ಥಳದಲ್ಲಿದ್ದರು. ಹೀಗಿರುವಾಗ, ಹಿರಿಯ ಅಧಿಕಾರಿಗಳಿಗೆ ಗುಂಪು ಹತ್ಯೆಯ ಬಗ್ಗೆ ತಿಳಿದಿರಲಿಲ್ಲ ಎಂಬ ಪೊಲೀಸರ ಹೇಳಿಕೆ ಅನುಮಾನಾಸ್ಪದವಾಗಿದೆ. ಹಿರಿಯ ಅಧಿಕಾರಿಗಳು ಘಟನೆ ನಡೆದ ಸ್ಥಳದಲ್ಲಿದ್ದರೂ ಕೂಡಾ ಕೆಳ ಹಂತದ ಅಧಿಕಾರಿಗಳು ಮಾಹಿತಿ ನೀಡಲಿಲ್ಲ ಎಂಬುದು ಪೊಲೀಸ್ ವ್ಯವಸ್ಥೆಯಲ್ಲಿ ಹೊಣೆಗಾರಿಕೆ ಯಾರದ್ದು ಎಂಬ ಪ್ರಶ್ನೆಯನ್ನು ಎತ್ತುತ್ತದೆ ಮಾತ್ರವಲ್ಲ, ಇಲ್ಲಿ ವರಿಷ್ಠಾಧಿಕಾರಿಗಳನ್ನು ಬಚಾವು ಮಾಡಲು ಪ್ರಯತ್ನಗಳು ನಡೆದಿವೆಯೇ ಎಂಬ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

5. **ಪ್ರಮುಖ ವ್ಯಕ್ತಿಗಳ ತಲೆಮರೆಸುವಿಕೆ:** ಬಿಜೆಪಿಯ ಮಾಜಿ ಕಾರ್ಪೊರೇಟರ್ ಅವರ ಪತಿ ರವೀಂದ್ರ ನಾಯಕ್ ಕ್ರಿಕೆಟ್ ಪಂದ್ಯದ ಪ್ರಮುಖ ಆಯೋಜಕರಲ್ಲಿ ಒಬ್ಬರಾಗಿದ್ದರು ಎನ್ನಲಾಗಿದ್ದು, ಅವರು ಘಟನಾ ಸ್ಥಳದಲ್ಲಿ ಹಾಜರಿದ್ದರು ಎಂದು ಹೇಳಲಾಗಿದೆ. ಪೊಲೀಸರು ಅವರನ್ನು ಹುಡುಕುತ್ತಿದ್ದರೂ ಅವರು ತಲೆಮರೆಸಿಕೊಂಡಿದ್ದಾರೆ. ಇಷ್ಟಾದರೂ, ಅವರ ಹೆಸರನ್ನು ಎಫ್.ಐ.ಆರ್‌ನಲ್ಲಿ ಸೇರಿಸಿಲ್ಲ ಎಂಬುದನ್ನು ಗಮನಿಸಿದರೆ, ಪೊಲೀಸರು ಅವರ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.
6. **ಸುಪ್ರೀಂ ಕೋರ್ಟ್ ನಿರ್ದೇಶನಗಳ ಉಲ್ಲಂಘನೆ:** ಮಾಬ್ ಲಿಂಚಿಂಗ್ ಕುರಿತು ಸುಪ್ರೀಂ ಕೋರ್ಟ್‌ನ ತೆಹಸೀನ್ ಪೂನಾವಾಲಾ ತೀರ್ಪನ್ನು ಜಾರಿಗೊಳಿಸಲು ನೋಡಲ್ ಅಧಿಕಾರಿಯಾಗಿ ನೇಮಕಗೊಂಡಿದ್ದ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಅವರಿಗೆ ತೀರ್ಪಿನ ಬಗ್ಗೆ ಹೆಚ್ಚು ತಿಳಿದೇ ಇರಲಿಲ್ಲ. ಇದು ಗುಂಪು ಹಿಂಸೆಯನ್ನು ತಡೆಗಟ್ಟಲು ಮತ್ತು ಪರಿಹರಿಸಲು ನಿರ್ಣಾಯಕ ಎನಿಸುವ ಕಾನೂನು ಪೂರ್ವನಿದರ್ಶನಗಳನ್ನು ಅನುಸರಿಸುವಲ್ಲಿ ವ್ಯವಸ್ಥೆಯು ವಿಫಲವಾಗಿದೆ ಎಂಬುದನ್ನು ಸೂಚಿಸುತ್ತದೆ.
7. **ತಾಂತ್ರಿಕ ಕಾರಣಗಳಿಗಾಗಿ ಜಾಮೀನು:** ಮೊದಲು ದಾಖಲಿಸಿದ ಎಫ್.ಐ.ಆರ್‌ನಲ್ಲಿ ಹೆಸರು ಇಲ್ಲದಿರುವುದು, ದೂರು ದಾಖಲಿಸುವಲ್ಲಿ ಉಂಟಾದ ವಿಳಂಬ ಅಥವಾ ಉದ್ದೇಶ ಕೊರತೆಯಿಂದಾಗಿ ಅನೇಕ ಆರೋಪಿಗಳಿಗೆ ಜಾಮೀನು ನೀಡಲಾಗಿದೆ. ಪೊಲೀಸರ ತನಿಖಾ ವೈಫಲ್ಯಗಳೇ ಆರೋಪಿಗಳಗೆ ಜಾಮೀನು ದೊರೆಯುವುದಕ್ಕೆ ನೆರವಾಗಿದೆ. ಸಾಕಷ್ಟು ಸಾಕ್ಷ್ಯ ಸಂಗ್ರಹಿಸಿ ಪ್ರಕರಣವನ್ನು ಗಟ್ಟಿಯಾಗಿ ಕಟ್ಟಿಕೊಡುವಲ್ಲಿ ಪೊಲೀಸರ ವಿಳಂಬ ಧೋರಣೆಯೇ ಇದಕ್ಕೆ ಕಾರಣವಾಗಿದೆ.

V. ಪರಿಣಾಮಗಳು: ಸೌಹಾರ್ದತೆ ಮತ್ತು ಕಾನೂನಿನ ಆಳ್ವಿಕೆಯ ನಾಶ

ಮೊಹಮ್ಮದ್ ಅಶ್ರಫ್ ಅವರ ಹತ್ಯೆಯು ಒಂದು ಪ್ರತ್ಯೇಕ ಘಟನೆಯಲ್ಲ. ದಕ್ಷಿಣ ಕನ್ನಡದಲ್ಲಿ ಆಳವಾಗಿ ಬೇರೂರಿರುವ ಕಾಯಿಲೆಯ ಒಂದು ಭಯಾನಕ ಲಕ್ಷಣವಾಗಿದೆ:

1. **ಅಲ್ಪಸಂಖ್ಯಾತರನ್ನು ಅಮಾನವೀಯಗೊಳಿಸುವುದು:** ಸದರಿ ಘಟನೆಯು ದ್ವೇಷದ ಪ್ರಚಾರದಿಂದ ಹುಟ್ಟಿಕೊಂಡ ಅಲ್ಪಸಂಖ್ಯಾತ ಸಮುದಾಯಗಳನ್ನು ಎಷ್ಟು ಅಮಾನವೀಯವಾಗಿ ನಡೆಸಿಕೊಳ್ಳಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗುಂಪುಹತ್ಯೆಯ ನಡೆದರೂ ಕೂಡ ಅಲ್ಲಿ ನೆರೆದಿದ್ದವರೆಲ್ಲಾ ಯಾವುದೇ ಪಶ್ಚಾತ್ತಾಪವಿಲ್ಲದೆ, ತಮ್ಮ ಕ್ರಿಕೆಟ್ ಆಟ ಮುಂದುವರಿಸಲು ಹಿಂದಿರುಗಿದ್ದು ಸಾರ್ವಜನಿಕ ಮೌಲ್ಯಗಳು ಯಾವ ಮಟ್ಟಕ್ಕೆ ಕುಸಿದಿದೆ ಎಂಬುದನ್ನು ಸೂಚಿಸುತ್ತಿದೆ.

2. **ಕಾನೂನಿನ ಆಳ್ವಿಕೆಯ ಕುಸಿತ:** ಸರಕಾರಿ ಸಂಸ್ಥೆಗಳು, ಅದರಲ್ಲೂ ವಿಶೇಷವಾಗಿ ಪೊಲೀಸರು ಕಾನೂನಿನ ಆಳ್ವಿಕೆಯನ್ನು ಕಾಪಾಡುವಲ್ಲಿ ವಿಫಲರಾಗಿದ್ದಾರೆ. ಎಫ್.ಐ.ಆರ್ ದಾಖಲಿಸಲು ವಿಳಂಬ ಮಾಡಿದ್ದು, ತನಿಖೆಯ ದಿಕ್ಕು ತಪ್ಪಿರುವುದು ಮತ್ತು ನ್ಯಾಯಾಂಗವು ತಾಂತ್ರಿಕ ಕಾರಣಗಳನ್ನು ಮುಂದೊಡ್ಡಿ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವುದು ನಾಗರಿಕರನ್ನು ರಕ್ಷಿಸಿ ಮತ್ತು ಅಪರಾಧಿಗಳನ್ನು ಹೊಣೆಗಾರರನ್ನಾಗಿ ಮಾಡಲು ವ್ಯವಸ್ಥೆಯು ಸಿದ್ಧವಿಲ್ಲ ಅಥವಾ ಅಸಮರ್ಥವಾಗಿದೆ ಎಂಬುದನ್ನು ಸೂಚಿಸುತ್ತಿದೆ.

3. **ಶಿಕ್ಷೆಯಿಂದ ವಿನಾಯಿತಿ ಮತ್ತು ಸಾಮಾಜಿಕ ಬೇರ್ಪಡೆ:** ಗುಂಪು ಹಂತಕರು ಯಾವುದೇ ಭಯವಿಲ್ಲದೆ ವರ್ತಿಸಿದ್ದು ಮತ್ತು ಪ್ರತ್ಯಕ್ಷದರ್ಶಿಗಳು ಮಧ್ಯಪ್ರವೇಶಿಸದಿರುವುದು ಅಥವಾ ಘಟನೆಯನ್ನು ಪೊಲೀಸರಿಗೆ ತತ್ ಕ್ಷಣವೇ ವರದಿ ಮಾಡದಿರುವುದು ಹಿಂಸಾಚಾರವನ್ನು ಸಮಾಜವು ಎಷ್ಟರ ಮಟ್ಟಿಗೆ ಒಪ್ಪಿಕೊಂಡಿದೆ ಎಂಬುದನ್ನೂ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಮಾನ ನಾಗರಿಕ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ

ಎಂಬುದನ್ನು ತೋರಿಸುತ್ತದೆ.

4. **ದ್ವೇಷಕ್ಕೆ ರಾಜಕೀಯ ರಕ್ಷಣೆ:** ಕೋಮು ಹಿಂಸಾಚಾರದ ಇಂತಹ ಕೃತ್ಯಗಳಿಗೆ ರಾಜಕೀಯ ರಕ್ಷಣೆ ದೊರೆಯುತ್ತದೆ ಎಂಬುದನ್ನು ವರದಿ ಸೂಚಿಸುತ್ತಿದೆ. ಗೃಹ ಸಚಿವರು ಆರಂಭದಲ್ಲಿ ವದಂತಿಗಳನ್ನೇ ತಮ್ಮ ಹೇಳಿಕೆಯನ್ನಾಗಿಸಿದ್ದು ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

5. **ದ್ವೇಷ ಭಾಷಣದ ಪರಿಣಾಮಗಳು:** ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಡಿದ ದ್ವೇಷ ಭಾಷಣಗಳಿಂದ ಪ್ರೇರಿತವಾಗಿ ದಕ್ಷಿಣ ಕನ್ನಡದಲ್ಲಿ ನಡೆದ ಎರಡು ಕೊಲೆಗಳು ಅಪಾಯಕಾರಿ ಕೋಮುದ್ವೇಷಕ್ಕೆ ಕೊನೆಯಿಲ್ಲ ಎಂಬುದನ್ನು ತೋರಿಸುತ್ತವೆ. ಪೊಲೀಸರು ಸುಪ್ರೀಂ ಕೋರ್ಟ್‌ನ ಆದೇಶಗಳ ಹೊರತಾಗಿಯೂ ಅಂತಹ ದ್ವೇಷ ಭಾಷಣದ ವಿರುದ್ಧ ಕ್ರಮ ಕೈಗೊಳ್ಳದಿರುವುದು ಆತಂಕಕಾರಿಯಾಗಿದೆ ವಿಷಯವಾಗಿದೆ.

## **VI.** ಶಿಫಾರಸುಗಳು: ಮಾನವೀಯತೆಯನ್ನು ಮರುಸ್ಥಾಪಿಸೋಣ, ಮತ್ತೆ ಕಟ್ಟೋಣ

ದಕ್ಷಿಣ ಕನ್ನಡದಲ್ಲಿ ನ್ಯಾಯ, ಮಾನವ ಘನತೆ ಮತ್ತು ಕಾನೂನಿನ ಆಳ್ವಿಕೆಯನ್ನು ಪುನಃಸ್ಥಾಪಿಸಲು ತಕ್ಷಣದ ಮತ್ತು ದೀರ್ಘಕಾಲೀನ ಕ್ರಮಗಳಿಗಾಗಿ ಕರೆ ನೀಡುವ ಮೂಲಕ ವರದಿ ಮುಕ್ತಾಯಗೊಳ್ಳುತ್ತದೆ:

<u>ರಾಜ್ಯ ಸರ್ಕಾರಕ್ಕೆ ಶಿಫಾರಸುಗಳು</u>

1. ಸುಪ್ರೀಂ ಕೋರ್ಟ್‌ನ ತೆಹಸೀನ್ ಎಸ್. ಪೂನಾವಾಲಾ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದ ತೀರ್ಪನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಮತ್ತು ಅದರ ಅಡಿಯಲ್ಲಿ ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆ, ಪರಿಹಾರ ಮತ್ತು ಶಿಕ್ಷೆಯ ಕ್ರಮಗಳನ್ನು ತಕ್ಷಣವೇ ಜಾರಿಗೊಳಿಸಬೇಕು.
2. ಈ ಪ್ರಕರಣದ ತನಿಖೆಯನ್ನು ತಕ್ಷಣವೇ ಸಿ.ಐ.ಡಿಗೆ ವರ್ಗಾಯಿಸಬೇಕು.
3. ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 37/25 ರ ವಿಚಾರಣೆಗೆ ತಕ್ಷಣವೇ ವಿಶೇಷ ಸರ್ಕಾರಿ ಅಭಿಯೋಜಕರನ್ನು (ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಅನ್ನು)ನೇಮಿಸಬೇಕು.
4. ತೆಹಸೀನ್ ಪೂನಾವಾಲಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಮತ್ತು ಸರ್ಕಾರಿ ಆದೇಶದ ಪ್ರಕಾರ ಮೊಹಮ್ಮದ್ ಅಶ್ರಫ್ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು.
5. ದಕ್ಷಿಣ ಕನ್ನಡದಲ್ಲಿ ಕೋಮುವಾದ, ದ್ವೇಷ ಭಾಷಣ ಮತ್ತು ಸುಳ್ಳು ಸುದ್ದಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಹೊಸದಾಗಿ ರಚಿಸಲಾದ ಕೋಮು ಸೌಹಾರ್ದ ಪಡೆ ಹೇಗೆ ಉತ್ತಮವಾಗಿ ಕಾರ್ಯನಿರ್ವಹಿಸಬಹುದು ಎಂಬುದರ ಕುರಿತು ನಾಗರಿಕ ಸಮಾಜದೊಂದಿಗೆ ಸಮಾಲೋಚನಾ ಸಭೆ ಕರೆಯಬೇಕು.
6. ಮೊಹಮ್ಮದ್ ಅಶ್ರಫ್ ಅವರ ಗುಂಪು ಹತ್ಯೆಯ ವಿಚಾರಣೆಗಾಗಿ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.
7. ಶಕ್ತಿ ವಾಹಿನಿ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳನ್ನು ಅನುಷ್ಠಾನಗೊಳಿಸಬೇಕು.
8. ಗೃಹ ಸಚಿವಾಲಯವು 2008 ರಲ್ಲಿ ಹೊರಡಿಸಿದ ಕೋಮು ಸೌಹಾರ್ದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
9. ಪೊಲೀಸ್ ಪಡೆ ಈ ಪ್ರದೇಶದ ಸಾಮಾಜಿಕ ರಚನೆಯನ್ನು ಪ್ರತಿನಿಧಿಸುವಂತಿರಬೇಕು ಮತ್ತು ಪೊಲೀಸ್ ಹಾಗೂ ಆಡಳಿತಾಧಿಕಾರಿಗಳು ಪ್ರಾಮಾಣಿಕತೆ, ದಕ್ಷತೆ, ನಿಷ್ಪಕ್ಷಪಾತ ಮತ್ತು ಪಕ್ಷಾತೀತ ದೃಷ್ಟಿಕೋನವನ್ನು ಹೊಂದಿರಬೇಕು. ಪೊಲೀಸ್ ಪಡೆಯ ತರಬೇತಿ ಕಾರ್ಯಕ್ರಮವನ್ನು ಪರಿಶೀಲಿಸಿ, ಪೊಲೀಸರಲ್ಲಿ ಜಾತ್ಯತೀತತೆ ಮತ್ತು ಕೋಮು ಸೌಹಾರ್ದತೆಯ ಮನೋಭಾವವನ್ನು ಬೆಳೆಸುವುದು ಅವಶ್ಯಕ. ಇದಕ್ಕಾಗಿ ಗೃಹ ಸಚಿವಾಲಯವು 2008 ರಲ್ಲಿ ಹೊರಡಿಸಿದ ಕೋಮು ಸೌಹಾರ್ದ ಮಾರ್ಗಸೂಚಿಗಳ ಪ್ರಕಾರ ವಿಶೇಷ ತರಬೇತಿ ನೀಡಬೇಕು ಮತ್ತು ಭಾರತದ ಸರ್ವೋಚ್ಚ ನ್ಯಾಯಾಲಯವು ಪ್ರವಾಸಿ ಭಲಾಯಿ ಸಂಘಟನ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಇದನ್ನು ಅನುಮೋದಿಸಿದೆ.
10. ಕರ್ನಾಟಕ ಸರ್ಕಾರಕ್ಕೆ ಯಾವುದೇ ಸಮಾನಾಂತರ ಆಡಳಿತ ಇರಬಾರದು. ನಿರ್ದಿಷ್ಟವಾಗಿ ಕೋಮು ಹಿಂಸಾಚಾರದಲ್ಲಿ ತೊಡಗಿರುವ ಎಲ್ಲಾ ಹಿಂದುತ್ವ ಸಂಘಟನೆಗಳ ಸದಸ್ಯರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು.

ಜಿಲ್ಲಾಡಳಿತಕ್ಕೆ ಶಿಫಾರಸುಗಳು

1. ಪೊಲೀಸ್, ನಾಗರಿಕ ಸಮಾಜ, ವಿದ್ಯಾರ್ಥಿ ಸಂಘಟನೆಗಳು ಮತ್ತು ಮಹಿಳಾ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡ ಜಿಲ್ಲಾ ಕೋಮು ಸೌಹಾರ್ದ ಸಮಿತಿಯನ್ನು ರಚಿಸಬೇಕು.
2. ಉಪ ಜಿಲ್ಲಾಧಿಕಾರಿಗಳು ಅಲ್ಪಸಂಖ್ಯಾತ ಸಮುದಾಯದ ಸದಸ್ಯರೊಂದಿಗೆ ನಿಯಮಿತವಾಗಿ ಸಂವಹನ ನಡೆಸಿ ವಿಶ್ವಾಸ ಮೂಡಿಸುವ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಅವರ ಸಮಸ್ಯೆಗಳನ್ನು ಆಲಿಸಲು ಹಾಗೂ ಪರಿಹರಿಸಲು ನಿರ್ದಿಷ್ಟ ದಿನಗಳನ್ನು ಮೀಸಲಿಡಬೇಕು.

3. ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ನಿಯಂತ್ರಣ) ಕಾಯ್ದೆಯಡಿ ಪ್ರಸಾರ ಮಾರ್ಗಸೂಚಿಗಳನ್ನು ಅನುಸರಿಸಲು ಮಾಧ್ಯಮ ಸಂಸ್ಥೆಗಳು ಮತ್ತು ಪತ್ರಕರ್ತರನ್ನು ಪ್ರೋತ್ಸಾಹಿಸಲು ಪ್ರೆಸ್ ಕ್ಲಬ್‌ನೊಂದಿಗೆ ಸಹಕರಿಸಬೇಕು.
4. ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಶಾಂತಿ ಸಭೆಗಳನ್ನು ಆಯೋಜಿಸಬೇಕು.

ಜಿಲ್ಲಾ ಪೊಲೀಸ್ ಆಡಳಿತಕ್ಕೆ ಶಿಫಾರಸುಗಳು

1. (ಎ) ದಾಖಲಾದ ಕೋಮು ಗಲಭೆ ಪ್ರಕರಣಗಳ ಸಂಖ್ಯೆ, (ಬಿ) ಬಾಕಿ ಇರುವ ತನಿಖೆಗಳು, (ಸಿ) ದ್ವೇಷ ಭಾಷಣ/ಗುಂಪು ಹತ್ಯೆ ಪ್ರಕರಣಗಳ ವಿಚಾರಣೆಗಳ ಸಾರ್ವಜನಿಕ ಆನ್‌ಲೈನ್ ಟ್ರ್ಯಾಕರ್ ಅನ್ನು ಸಿದ್ಧಪಡಿಸಬೇಕು. ಇದರಿಂದ ನಾಗರಿಕ ಸಮಾಜವು ಪ್ರಕರಣಗಳು ಯಾವ ಹಂತದಲ್ಲಿದೆ ಎಂಬುದನ್ನು ಗಮನಿಸಲು ಸಾಧ್ಯವಾಗುತ್ತದೆ.
2. ಶಾಹೀನ್ ಅಬ್ದುಲ್ಲಾ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶಿಸಿದಂತೆ ಸ್ವಯಂಪ್ರೇರಿತವಾಗಿ ಎಫ್‌ಐಆರ್ ದಾಖಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
3. ದ್ವೇಷ ಅಪರಾಧ, ಕೋಮು ಗೂಂಡಾಗಿರಿ ಅಥವಾ ಕೋಮು ಹಿಂಸಾಚಾರದ ಪ್ರತಿಯೊಂದು ಪ್ರಕರಣದಲ್ಲೂ ಎಫ್.ಐ.ಆರ್ ದಾಖಲಿಸಬೇಕು ಮತ್ತು ಸಂತ್ರಸ್ತರು ದೂರು ನೀಡಲು ಭಯಪಡುವ ಸಂದರ್ಭದಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಬೇಕು. ಈ ಬಗ್ಗೆ ಸುತ್ತೋಲೆ ಹೊರಡಿಸಬೇಕು.
4. ಸುಳ್ಳು ಸುದ್ದಿ, ದ್ವೇಷ ಭಾಷಣ, ಅನುಮಾನಾಸ್ಪದ ಗುಂಪುಗಳ ಬಗ್ಗೆ ವರದಿ ಮಾಡಲು ಒಂದೇ ಸಂಖ್ಯೆ/ಅಪ್ಲಿಕೇಶನ್ ಅನ್ನು ಪ್ರಚಾರಪಡಿಸಬೇಕು. ಇದರಿಂದ ಪೊಲೀಸ್ ನಿಯಂತ್ರಣ ಕೊಠಡಿಗೆ ಸ್ವಯಂಚಾಲಿತವಾಗಿ ಮಾಹಿತಿ ತಲುಪುತ್ತದೆ.
5. ದ್ವೇಷ ಅಪರಾಧ ಮತ್ತು ಕೋಮು ಗೂಂಡಾಗಿರಿಯ ಎಲ್ಲಾ ಪ್ರಕರಣಗಳ ತನಿಖೆಯನ್ನು ತ್ವರಿತವಾಗಿ ನಡೆಸಬೇಕು.
6. ಪೊಲೀಸರಿಗೆ ರಾಜ್ಯದಲ್ಲಿ ಸಾಂವಿಧಾನಿಕ ಆಡಳಿತವನ್ನು ಕಾಪಾಡಲು ತರಬೇತಿ ನೀಡಬೇಕು. ವಿಶೇಷವಾಗಿ ದ್ವೇಷ ಅಪರಾಧಗಳು ಮತ್ತು ಕೋಮು ಗೂಂಡಾಗಿರಿಗಳ ಬಗ್ಗೆ ಗಮನ ಹರಿಸಬೇಕು.
7. ಎಲ್ಲಾ ನಾಗರಿಕರು ಭಯವಿಲ್ಲದೆ ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಗುವಂತೆ ನೋಡಿಕೊಳ್ಳಬೇಕು ಮತ್ತು ದಕ್ಷಿಣ ಕನ್ನಡದಲ್ಲಿ ಹರಡಿರುವ ಮತ್ತು ನಾಗರಿಕರು ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸುವುದಕ್ಕೆ ಭಯ ಪಡುವಂತಹ ವಾತಾವರಣವನ್ನು ಹೋಗಲಾಡಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
8. ಪುದುಚೇರಿ ಪೊಲೀಸರು ಕೈಗೊಂಡಿರುವಂತೆ, ಮಾಬ್ ಲಿಂಚಿಂಗ್ ಕುರಿತು ಸುಪ್ರೀಂ ಕೋರ್ಟ್‌ನ ತೆಹಸೀನ್ ಪೂನಾವಾಲಾ ತೀರ್ಪನ್ನು ಜಾರಿಗೊಳಿಸಲು ಒಂದು ಕಾರ್ಯಾಚರಣಾ ಮಾರ್ಗಸೂಚಿಯನ್ನು (SOP) ಹೊರಡಿಸಬೇಕು.

ಹೆಚ್ಚುತ್ತಿರುವ ಕೋಮುಭಾವನೆಗಳ ಈ ಸಂದರ್ಭದಲ್ಲಿ, ನಾಗರಿಕ ಸಮಾಜ ಮತ್ತು ಕಾಳಜಿಯುಳ್ಳ ಪ್ರತಿಯೊಬ್ಬರೂ ಸಮುದಾಯಗಳ ನಡುವೆ ಸೇತುವೆಗಳನ್ನು ನಿರ್ಮಿಸಬೇಕೆಂದು, ಮತ್ತು ರಾಜ್ಯ ಹಾಗೂ ಪೊಲೀಸ್ ಆಡಳಿತವನ್ನು ಅವರ ಕ್ರಮಗಳು ಹಾಗೂ ನಿಷ್ಕ್ರಿಯತೆಗಳಿಗೆ ಹೊಣೆಗಾರರನ್ನಾಗಿ ಮಾಡಲು ಮತ್ತು ಸಂವಿಧಾನದ ಆಶಯವನ್ನು ಎತ್ತಿಹಿಡಿಯಲು ಕರೆ ನೀಡುತ್ತೇವೆ.

ಮೊಹಮ್ಮದ್ ಅಶ್ರಫ್ ಅವರ ಹತ್ಯೆಗೆ ಕಾರಣರಾದವರನ್ನು ಹೊಣೆಗಾರರನ್ನಾಗಿ ಮಾಡುವ ಪ್ರಯತ್ನವೇ ಈ ಸತ್ಯಶೋಧನಾ ವರದಿ. ಈ ವರದಿಯು ದಕ್ಷಿಣ ಕನ್ನಡದಲ್ಲಿ ಮುಸ್ಲಿಮರನ್ನು ಯಾವ ಮಟ್ಟಕ್ಕೆ ಅಮಾನವೀಯಗೊಳಿಸಲಾಗಿದೆ ಮತ್ತು ಸೌಹಾರ್ದತೆಯ ಕಣ್ಮರೆಗೆ ಕಾರಣವಾಗುವ ನಿರಂತರ ಕೋಮು ಪ್ರಚಾರವನ್ನು ಬಹಿರಂಗಪಡಿಸುತ್ತದೆ. ಈ ದ್ವೇಷದ ಅಪರಾಧದಲ್ಲಿ ರಾಜ್ಯದ ಪಾತ್ರವನ್ನೂ ವರದಿ ಎತ್ತಿ ತೋರಿಸಿದೆ.

ಮೊಹಮ್ಮದ್ ಅಶ್ರಫ್ ಅವರ ಸಹೋದರ ಜಬ್ಬಾರ್ ಹೇಳುತ್ತಾರೆ, "ಇದೇ ಕಟ್ಟಕಡೆಯ ಗುಂಪು ಹತ್ಯೆಯಾಗಬೇಕು. ಇನ್ನು ಯಾವತ್ತೂ ಯಾರನ್ನೂ ಥಳಿಸಿ ಕೊಲ್ಲಬಾರದು. ಅಶ್ರಫ್ ಅವರನ್ನು ಥಳಿಸಿ ಕೊಂದವರೆಲ್ಲರೂ ತಮ್ಮ ಅಪರಾಧಕ್ಕೆ ಶಿಕ್ಷೆ ಅನುಭವಿಸಬೇಕು. ಗುಂಪು ಹತ್ಯೆ ಮತ್ತು ದ್ವೇಷದ ವಿರುದ್ಧ ಬಲವಾದ ಸಂದೇಶವನ್ನು ರವಾನಿಸಿದಾಗ ಅಶ್ರಫ್‌ಗೆ ನಿಜವಾಗಿಯೂ ನ್ಯಾಯ ಸಿಕ್ಕಂತಾಗುತ್ತದೆ."

**ಸಂಪೂರ್ಣ ವರದಿಯನ್ನು ಇಲ್ಲಿ ಓದಿ:**

https://pucl.org/wp-content/uploads/2025/06/Lost-Fraternity-A-Mob-Lynching-in-Broad-Daylight-PUCL-June-2025.pdf

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಅಡ್ವೊಕೇಟ್ ಮಾನವಿ (ಪಿಯುಸಿಎಲ್ - ಕರ್ನಾಟಕ) - 8489272331